FEBRUARY 28, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಕೊಪ್ಪಳ, ದಾವಣಗೆರೆ ಸೇರಿದಂತೆ,** ನಾಲ್ಕು ಜಿಲ್ಲೆಗಳಲ್ಲಿ, ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳು, ಗದಗ ಜಿಲ್ಲೆಯಲ್ಲಿ, ಸುಸಜ್ಜಿತ ತಾರಾಲಯ ಸಿದ್ಧಗೊಂಡಿವೆ ಎಂದು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ರಾಯಚೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಕಾರ್ಯ, ಮತ್ತು ರಾಜ್ಯದ 8 ಜಿಲ್ಲೆಗಳಲ್ಲಿ ಹೊಸ ವಿಜ್ಞಾನ ಕೇಂದ್ರಗಳು ಹಾಗೂ ನಾಲ್ಕು ಜಿಲ್ಲೆಗಳಲ್ಲಿ ತಾರಾಲಯ ಸ್ಥಾಪನೆಯ ಕಾರ್ಯ, ಪ್ರಗತಿಯಲ್ಲಿದೆ ಎಂದಿದ್ದಾರೆ.

<><><>

**‘ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು;** ವಿಕಸಿತ ಭಾರತದ ವೇಗವರ್ಧಕರು’ ಎಂಬ ಧ್ಯೇಯದೊಂದಿಗೆ, ಇಂದು ನಾಡಿನಾದ್ಯಂತ, ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಗುತ್ತಿದೆ. ಸರ್ ಸಿ.ವಿ. ರಾಮನ್ ಅವರ, ರಾಮನ್ ಇಫೆಕ್ಟ್ ಆವಿಷ್ಕಾರಗೊಂಡ ದಿನವನ್ನು, ಭಾರತದ ರಾಷ್ಟ್ರೀಯ ವಿಜ್ಞಾನ ದಿನವಾಗಿ ಆಚರಿಸಲಾಗುತ್ತದೆ.

<><><>

**ವಿವಿಧ ಇಲಾಖೆಗಳ,** 56 ಸಾವಿರದ 432 ಹುದ್ದೆಗಳನ್ನು, ಕಾಲಮಿತಿಯಲ್ಲಿ ಭರ್ತಿ ಮಾಡಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಪರಿಶಿಷ್ಟ ಸಮುದಾಯಕ್ಕೆ ಶೇಕಡ 6ರಷ್ಟು ಹೆಚ್ಚಿಸಿರುವ ಮೀಸಲಾತಿಯ ಪ್ರಮಾಣದ ಹುದ್ದೆಗಳನ್ನು ಕಾಯ್ದಿರಿಸಿ, ಪ್ರಕ್ರಿಯೆ ಆರಂಭಿಸಲಿದೆ. ಖಾಲಿ ಹುದ್ದೆಗಳ ನೇಮಕಾತಿಯನ್ನು, 30 ದಿನದೊಳಗೆ ಪೂರೈಸುವ ಬಗ್ಗೆ, ಸಚಿವ ಸಂಪುಟ ನಿರ್ಧರಿಸಿದೆ.

<><><>

**ಪ್ರಕೃತಿ ವಿಕೋಪದಿಂದ ಬೆಳೆ ನಷ್ಟವಾದರೆ,** ಫಸಲು ಕಳೆದುಕೊಂಡ, ರೈತರಿಗೆ ಮಾತ್ರವಲ್ಲದೇ, ಒಂದು ಗ್ರಾಮ ವ್ಯಾಪ್ತಿಯನ್ನು, ಘಟಕವಾಗಿ ಪರಿಗಣಿಸಿ, ಬೆಳೆ ವಿಮೆ ಅಡಿ ಹೆಸರು ನೋಂದಾಯಿಸಿದ, ಎಲ್ಲ ರೈತರಿಗೂ ಪರಿಹಾರ ನೀಡುವ ಹೊಸ ವ್ಯವಸ್ಥೆಯನ್ನು, ರಾಜ್ಯ ಸರ್ಕಾರ ಜಾರಿಗೆ ತರಲಿದೆ. ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಎಚ್.ಕೆ. ಪಾಟೀಲ ಮಾಹಿತಿ ನೀಡಿ, 2026–27ನೇ ಸಾಲಿನಿಂದ, ರಾಜ್ಯದಲ್ಲಿ, ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯನ್ನು, *‘ಕಂಪ್ಲೀಟ್ ರಿಸ್ಕ್ ಟ್ರಾನ್ಸ್‌ಫರ್ ಮೆಕ್ಯಾನಿಸಂ’* ಮಾದರಿಯಲ್ಲಿ, ಅನುಷ್ಠಾನಗೊಳಿಸಲಾಗುವುದು ಎಂದರು.

<><><>

**ಯಾದಗಿರಿ ಜಿಲ್ಲೆಯಲ್ಲಿ,** ಕುಡಿಯುವ ನೀರಿನ ಸಮಸ್ಯೆಯ ದೂರುಗಳಿಗೆ, ತ್ವರಿತ ಕ್ರಮಕೈಗೊಳ್ಳಲು, ಸಹಾಯವಾಣಿ ಆರಂಭಿಸಲಾಗಿದೆ ಎಂದು, ಯಾದಗಿರಿ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಲವೀಶ ಒರಡಿಯಾ ತಿಳಿಸಿದ್ದಾರೆ.

<><><>

**ಕೃಷಿ ಯೋಗ್ಯ ಮಣ್ಣಿನ ಫಲವತ್ತತೆ,** ಕಡಿಮೆಯಾಗಿದೆ. ರಾಸಾಯನಿಕಗಳ ಅತಿ ಬಳಕೆಯಿಂದ, ಮುಂದಿನ ಪೀಳಿಗೆಯನ್ನು ಕಾಪಾಡಬೇಕಿದೆ ಎಂದು, ಪಿರಿಯಾಪಟ್ಟಣದ ಬೀಜ ಸಂರಕ್ಷಕಿ ಪದ್ಮಮ್ಮ ಕಾಳಜಿ ವ್ಯಕ್ತ ಪಡಿಸಿದ್ದಾರೆ. ಮೈಸೂರಿನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿತ, ಕಿಸಾನ್ ಸ್ವರಾಜ್ ಸಮ್ಮೇಳನದಲ್ಲಿ ಅವರು, ಮಾತನಾಡಿದರು. ಕೃಷಿಕರು ಭೂಮಿ ಮಾರಾಟ ಮಾಡಬೇಡಿ. ಒಂದು ಬಾರಿ ಹೋದ ಜಮೀನು ಮತ್ತೆ ಗಳಿಸುವುದು ಕಷ್ಟ ಎಂದು, ಅವರು ಕಳಕಳಿಯ ಮನವಿ ಮಾಡಿದರು. ದಕ್ಷಿಣ ಭಾರತದ 11 ರಾಜ್ಯಗಳಿಂದ, ಸಾವಯವ ಕೃಷಿಕರು ಪಾಲ್ಗೊಂಡಿದ್ದು, 37 ಸಾವಯವ ಉತ್ಪನ್ನಗಳ ಮಳಿಗೆಗಳು, ಆಕರ್ಷಕವಾಗಿವೆ.

<><><>

**ಹೋಳಿ ಹಬ್ಬದ ಹಿನ್ನೆಲೆ,** ಧಾರವಾಡ ಜಿಲ್ಲೆ, ನವಲಗುಂದ ತಾಲೂಕು, ಐತಿಹಾಸಿಕ ಶ್ರೀ ರಾಮಲಿಂಗ ಕಾಮದೇವರ ದರ್ಶನಕ್ಕೆ, ಸಹಸ್ರಾರು ಭಕ್ತಾದಿಗಳು, ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸಿದ್ದಾರೆ. ಇಂದು ಬೆಳಗ್ಗೆ ಪ್ರಾಣ ಪ್ರತಿಷ್ಠಾಪನೆಗೊಂಡ, ರಾಮಲಿಂಗ ಕಾಮದೇವರ ದರ್ಶನ, ಮಾರ್ಚ್ 4, ಬಣ್ಣದ ಓಕುಳಿಯ ಸಂಜೆಯ ವರೆಗೂ ಮುಂದುವರೆಯಲಿದೆ. ಮಾರ್ಚ್ 3 ರಂದು ಹೋಳಿ ಹುಣ್ಣಿಮೆ ನಿಮಿತ್ತ, ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ.

<><><>

**ಧಾರವಾಡ ತಾಲೂಕು, ರಾಯಾಪುರದ,** ನಿರಾಶ್ರಿತರ ಕಲ್ಯಾಣ ಕೇಂದ್ರ ಹಾಗೂ ಕಲಘಟಗಿಯ, ವಿಶೇಷ ಚೇತನರಿಗೆ, 20 ಗಾಲಿ ಖುರ್ಚಿಗಳು, ನೂರು ಫಿಸಿಯೊಥೆರಪಿ ಬಾಲ್, 50ಕ್ಕೂ ಹೆಚ್ಚು ವ್ಯಾಯಾಮ ಸಾಧನಗಳನ್ನು, ಜಿಲ್ಲಾಧಿಕಾರಿ ಆರ್.ಸ್ನೇಹಲ್ ವಿತರಿಸಿದರು. ಧಾರವಾಡ ಜಿಲ್ಲೆ ಉಸ್ತುವಾರಿ ಸಚಿವ ಸಂತೋಷ ಲಾಡ ಅವರ, 51 ನೇ ಜನ್ಮದಿನದ ಹಿನ್ನೆಲೆ, ಲಾಡ ಪ್ರತಿಷ್ಠಾನ, 10 ಲಕ್ಷ ರೂಪಾಯಿ ಮೊತ್ತದ ವಿವಿಧ ಪರಿಕರಗಳನ್ನು, ಧಾರವಾಡದ ಶಿಕ್ಷಕಿಯರ ತರಬೇತಿ ಕಾಲೇಜು ಸಭಾಂಗಣದಲ್ಲಿ, ಜಿಲ್ಲಾಧಿಕಾರಿಗಳ ಮೂಲಕ, ನೀಡಿತು.

<><><>

**ವನವಾಸಿ ಸಿದ್ದಿ ಸಮುದಾಯಕ್ಕೆ,** ಕೃಷಿ ಜೊತೆ, ಜೇನು ಸಾಕಾಣಿಕೆ ಉಪಯುಕ್ತ ಕಸುಬು ಎಂದು, ಧಾರವಾಡ ಜಿಲ್ಲೆ, ಅಳ್ನಾವರ ತಾಲೂಕಿನ, ಮಧು ವನದಲ್ಲಿ, ಜೇನು ಕೃಷಿ ತರಬೇತಿ ಕಾರ್ಯಾಗಾರವನ್ನು, ತೋಟಗಾರಿಕೆ ಇಲಾಖೆ ಆಯೋಜಿಸಿತ್ತು. ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದ ಆಯ್ದ 30 ಸಿದ್ದಿ ಕುಟುಂಬಗಳಿಗೆ, ಕೃಷಿ ಇಲಾಖೆ, ಆತ್ಮ ಯೋಜನೆ ಅಡಿ, ಪರಿಶಿಷ್ಟ ಪಂಗಡದ ಅರಣ್ಯ ಸಾಗುವಳಿ ಹಕ್ಕು ಪತ್ರ ಪಡೆದ, ರೈತರಿಗೆ, ವಿಜಯಕುಮಾರ ರಾಗಿ, ಪ್ರಾತ್ಯಕ್ಷಿಕೆ ನೀಡಿದರು. ಯಲ್ಲಾಪುರ ತಾಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷೆ, ಸುಜಾತಾ ಸಿದ್ದಿ ಮಾತನಾಡಿ, ಜೇನು ಕೃಷಿ ಬಗ್ಗೆ ಉಪಯುಕ್ತ ಮಾಹಿತಿ ದೊರಕಿತು ಎಂದರು.

<><><>

**ಕರ್ನಾಟಕ ಮತ್ತು ಜಮ್ಮು-ಕಾಶ್ಮೀರ ನಡುವಿನ,** ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯ ಇಂದು, ಹುಬ್ಬಳ್ಳಿಯ ರಾಜನಗರದ ಕೆ.ಎಸ್.ಸಿ.ಎ. ಕ್ರೀಡಾಂಗಣದಲ್ಲಿ ನಡೆಯುತ್ತಿದೆ.

<><><>

**ಜಮ್ಮು-ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲ** ಇಂದು ಬೆಳಗ್ಗೆ 10 ಗಂಟೆಗೆ, ಕ್ರೀಡಾಂಗಣಕ್ಕೆ ಆಗಮಿಸಿದ್ದು, ಪಂದ್ಯವನ್ನು ವೀಕ್ಷಿಸುತ್ತಿದ್ದಾರೆ. ತಮ್ಮ ತಂಡ ಮೊದಲ ಬಾರಿಗೆ, ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದು, ಹೆಮ್ಮೆಯ ಸಂಗತಿ. ತಮ್ಮ ತಂಡ ಟ್ರೋಫಿಯೊಂದಿಗೆ ಮರಳುವ ವಿಶ್ವಾಸವಿದೆ ಎಂದು, ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಅವರು ಪ್ರತಿಕ್ರಿಯಿಸಿದರು.

<><><>

**ಡ್ರಾ ದತ್ತ ರಣಜಿ ಫೈನಲ್ ಟೆಸ್ಟ್ ಪಂದ್ಯ ಸಾಗುತ್ತಿದ್ದು,** ಮೊದಲ ಇನ್ನಿಂಗ್ಸ್ ಲೀಡ್ ಸಾಧಿಸಿದ ಹಿನ್ನೆಲೆ, ರಣಜಿ ಟ್ರೋಫಿ ಕಪ್, ಜಮ್ಮು–ಕಾಶ್ಮೀರ ತಂಡದ ಪಾಲಾಗಲಿದೆ. ಅಂತಿಮ ವರದಿ ಬಂದಾಗ, 570 ರನ್‌ಗಳ ಲೀಡ್‌ನೊಂದಿಗೆ, ಜಮ್ಮು–ಕಾಶ್ಮೀರ ತಂಡ, 89ನೇ ಓವರ್ ನಲ್ಲಿ ಬ್ಯಾಟಿಂಗ್ ಮುಂದುವರೆಸಿದೆ.

<><><>

**ದಕ್ಷಿಣಕನ್ನಡ ಜಿಲ್ಲೆ ಮೂಡುಬಿದಿರೆಯ,** ಆಳ್ವಾ ಶಿಕ್ಷಣ ಪ್ರತಿಷ್ಠಾನದ ಆಶ್ರಯದಲ್ಲಿ ಜರುಗಿದ, ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯಗಳ, ಮಹಿಳಾ ಕ್ರಾಸ್ ಕಂಟ್ರಿ ಚಾಂಪಿಯನ್‌ಶಿಪ್‌ನಲ್ಲಿ, ಮಂಗಳೂರು ವಿಶ್ವವಿದ್ಯಾಲಯ, ಸಮಗ್ರ ವೀರಾಗ್ರಣಿಯಾಯಿತು. ಪುಣೆಯ ಸಾವಿತ್ರಿ ಬಾಯಿ ಫುಲೆ ವಿಶ್ವವಿದ್ಯಾಲಯ, ದ್ವಿತೀಯ ಸ್ಥಾನ, ರೋಹ್ಟಕ್ ವಿಶ್ವವಿದ್ಯಾಲಯ ತೃತೀಯ ಸ್ಥಾನ ಗಳಿಸಿದವು. ದೇಶದ 133 ವಿಶ್ವವಿದ್ಯಾಲಯಗಳಿಂದ, 680ಕ್ಕೂ ಅಧಿಕ ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**